
# ಹೃದಯಾಘಾತ ಅಲಕ್ಷ್ಯ ಬೇಡ



**ಹೃದಯಾಘಾತದ ಲಕ್ಷಣ ಕಂಡ ಕೂಡಲೇ ಇಸಿಜಿ ಮಾಡಿಸಿಕೊಳ್ಳಬೇಕು. ಎದೆನೋವು ಬಂದರೆ ಅಸಿಡಿಟಿ ಎಂದು ಭಾವಿಸಿ ಅಲಕ್ಷ್ಯ ಮಾಡುವುದು ಸರಿಯಲ್ಲ. ಹೃದಯ ಬೇನೆಯ ಯಾವುದೇ ಲಕ್ಷಣ ಕಂಡುಬಂದರೂ ಕೂಡಲೇ ತಜ್ಞ ವೈದ್ಯರನ್ನು ಭೇಟಿಯಾಗಿ ಚಿಕಿತ್ಸೆ ಪಡೆಯಬೇಕು.**

**★ ಉಮಾ ಅನಂತ್**

ಪ್ರಾಣಾಂತಿಕ ಎಂದು ಭಯ ಹುಟ್ಟಿಸುವ ಹೃದಯಾಘಾತ ಸಮಸ್ಯೆ ಇಂದು ಮಿತಿಮೀರಿ ಹೆಚ್ಚುತ್ತಿದೆ. ಮಧುಮೇಹ, ಏರು ರಕ್ತದೊತ್ತಡ, ಹೈಪರ್‌ಟೆನ್ಷನ್‌ನಂತಹ ಜೀವನಶೈಲಿ ಕಾಯಿಲೆಗಳಿಂದಲೇ ಹೃದಯಾಘಾತ ಪ್ರಮಾಣವೂ ಇದೀಗ ಹೆಚ್ಚುತ್ತಲಿದ್ದು, ತ್ವರಿತವಾಗಿ ಪತ್ತೆ ಹಚ್ಚಿ ಚಿಕಿತ್ಸೆ ನೀಡಿದರೆ ಪ್ರಾಣಾಪಾಯದಿಂದ ಪಾರಾಗಬಹುದು. ಹೃದಯಾಘಾತದ ಪ್ರಮಾಣವನ್ನು ತಿಳಿಯಲು ಮೊದಲು ಇಸಿಜಿ ಮಾಡಿಸಿ ಕೊಳ್ಳಬೇಕು. ಇದರ ಕ್ಷಿಪ್ರ ಫಲಿತಾಂಶ ಚಿಕಿತ್ಸೆಗೆ ಬಹಳ ಸಹಕಾರಿ.

'ದೇಶದಲ್ಲಿ ಹೃದ್ರೋಗದಿಂದಲೇ ಶೇ. 25ರಷ್ಟು ಮಂದಿ ಸಾವನ್ನಪ್ಪುತ್ತಿದ್ದಾರೆ. ಇವರಲ್ಲಿ ಬಹುತೇಕ ಮಂದಿ 40 ವರ್ಷಕ್ಕಿಂತ ಕೆಳಗಿನವರು ಎಂಬುದು ಆತಂಕದ ವಿಚಾರ. ಹೃದಯಾಘಾತವಾದ ಕೂಡಲೇ ಪ್ರಾರಂಭಿಕ ಚಿಕಿತ್ಸೆಯಾಗಿ ನೀಡುವ ಮಾತ್ರೆಯಿಂದ ಮುಂದಾಗುವ ಅಪಾಯವನ್ನು ತಡೆಗಟ್ಟುವ ಸಾಧ್ಯತೆ ಇದೆ. ಕ್ಯಾನ್ಸರ್ ಅನ್ನು ರಾಷ್ಟ್ರೀಯ ಪ್ರಮುಖ ರೋಗ ಎಂದು ಪರಿಗಣಿಸಿದಂತೆ ಹೃದ್ರೋಗವನ್ನೂ ರಾಷ್ಟ್ರೀಯ ಪ್ರಮುಖ ರೋಗ ಎಂದು ಪರಿಗಣಿಸಬೇಕಾಗಿದೆ' ಎನ್ನುತ್ತಾರೆ ಬೆಂಗಳೂರಿನ ಜಯದೇವ ಹೃದ್ರೋಗ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕರಾದ ಡಾ. ಸಿ.ಎನ್. ಮಂಜುನಾಥ್.

'ಭಾರತದಲ್ಲಿ ಶೇ.79ರಷ್ಟು ಕ್ಲಿನಿಕ್‌ಗಳಲ್ಲಿ ಇಸಿಜಿ ವ್ಯವಸ್ಥೆ ಇಲ್ಲ. ಹೀಗಾಗಿ ಹೃದಯ ಸಂಬಂಧಿ ಕಾಯಿಲೆಯ ಪತ್ತೆ ಕಷ್ಟವಾಗುತ್ತಿದೆ. ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳಲ್ಲಿ ಬಹುತೇಕ ಕ್ಲಿನಿಕ್‌ಗಳಲ್ಲಿ ಇಸಿಜಿ ವ್ಯವಸ್ಥೆ ಇಲ್ಲ. ಹೃದಯಾಘಾತವಾಗಿ 30 ನಿಮಿಷಗಳೊಳಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಆರಂಭಿಸಬೇಕು. ತಡವಾದರೆ ಅಪಾಯವೂ ಹೆಚ್ಚು. ತ್ವರಿತವಾಗಿ ಮತ್ತು ನಿಖರವಾಗಿ ಪಡೆಯುವ ಇಸಿಜಿಯಿಂದ ಬಹಳ ಪ್ರಯೋಜನವಿದೆ. ಹೆಚ್ಚುತ್ತಿರುವ ಹೃದಯಾಘಾತವನ್ನು ತಡೆಯುವ ಉದ್ದೇಶ ಹಾಗೂ ಹೃದಯಾಘಾತಕ್ಕೆ ಒಳಗಾದವರಿಗೆ ಉತ್ತಮ ಚಿಕಿತ್ಸೆ ನೀಡುವ ಉದ್ದೇಶದಿಂದ ಅತ್ಯಾಧುನಿಕ ತಂತ್ರಜ್ಞಾನವಿರುವ ಇಸಿಜಿ ಮೆಷಿನ್‌ಗಳನ್ನು ಬಳಸಬೇಕಾಗಿದೆ. ಇದೀಗ ಆ್ಯಂಬುಲೆನ್ಸ್‌ನಲ್ಲೇ ಹೃದಯಾಘಾತಕ್ಕೆ ಸೂಕ್ತ ಚಿಕಿತ್ಸೆ ನೀಡುವ ವ್ಯವಸ್ಥೆ ಕಲ್ಪಿಸಲಾಗಿದೆ. ಇದರಿಂದ ಹೃದಯಾಘಾತದಿಂದ ಸಾಯುವ ಪ್ರಮಾಣವನ್ನು ಕಡಿಮೆ ಮಾಡಬಹುದು. ಅಲ್ಲದೆ ಮಹಾನಗರಗಳಲ್ಲಿ ಸಂಚಾರದಟ್ಟಣೆಯಿಂದ ರೋಗಿ ಆಸ್ಪತ್ರೆ ತಲುಪುವಾಗ ತಡವಾಗಿ ಪರಿಸ್ಥಿತಿ ಮತ್ತಷ್ಟು ಹದಗೆಡುವುದನ್ನು ತಪ್ಪಿಸಿದಂತಾಗುತ್ತದೆ' ಎನ್ನುತ್ತಾರೆ ಡಾ. ಮಂಜುನಾಥ್.



ಟ್ರೈಕಾಗ್ ಇಸಿಜಿ ಯಂತ್ರ

'ಹೃದಯದಲ್ಲಿ ರಕ್ತ ಸಂಚಾರ ಸುಗಮವಾಗಬೇಕು. ಇದಕ್ಕೆ ತಡೆ ಉಂಟಾದರೆ ಆ್ಯಂಜಿಯೊಗ್ರಾಮ್ ಹಾಗೂ ಆ್ಯಂಜಿಯೊಪ್ಲಾಸ್ಟಿಯಂತಹ ಚಿಕಿತ್ಸಾ ಕ್ರಮವೇ ಸೂಕ್ತವಾದದ್ದು. ಆ್ಯಂಜಿಯೊಪ್ಲಾಸ್ಟಿ ಹೃದಯಕ್ಕೆ ಸಂಬಂಧಿಸಿದ ರಕ್ತಸಂಚಾರ ತಡೆ ಉಂಟಾದಲ್ಲಿ ಬಳಸುವ ಅತ್ಯಾಧುನಿಕ ಚಿಕಿತ್ಸಾ ವಿಧಾನ. ಮಕ್ಕಳಲ್ಲಿ ಹೃದಯಾಘಾತ ಈಗೀಗ ಹೆಚ್ಚುತ್ತಿದೆ. ಕೆಲವು ಮಕ್ಕಳಲ್ಲಿ ಅನುವಂಶೀಯವಾಗಿ ಹೃದಯದಲ್ಲಿ ರಂಧ್ರದಂತಹ ಸಮಸ್ಯೆ, ರಕ್ತಸಂಚಾರ ತಡೆ ಸಮಸ್ಯೆ ಮುಂತಾದವು ಉಂಟಾಗುತ್ತದೆ. ಹೃದಯ ಸಂಬಂಧಿ ಕಾಯಿಲೆ ಇರುವ ಶೇ.50ರಷ್ಟು ಮಕ್ಕಳಿಗೆ ಶಸ್ತ್ರಚಿಕಿತ್ಸೆ ಇಲ್ಲದೆಯೇ ಚಿಕಿತ್ಸೆ ನೀಡಿದರೆ ಸಾಕು. ನವಜಾತ ಶಿಶುಗಳಿಂದ ಒಂದು ವರ್ಷದವರೆಗಿನ ಮಕ್ಕಳಿಗೆ ಹೃದಯ ತೊಂದರೆ ಇದ್ದರೆ ಚಿಕಿತ್ಸೆ ನೀಡುವುದು ದೊಡ್ಡ ಸವಾಲಿನ ವಿಷಯವೇ' ಎನ್ನುತ್ತಾರೆ ಈ ವೈದ್ಯರು.

'ಹೃದಯಾಘಾತವಾದಾಗ ಪ್ರಥಮ ಚಿಕಿತ್ಸೆ ಎಷ್ಟು ಮುಖ್ಯವೋ, ಇಸಿಜಿ ಮೂಲಕ ಹೃದಯದ ಚಲನೆಯ ಸ್ಥಿತಿಗತಿಯನ್ನು ಕ್ಷಿಪ್ರವಾಗಿ ಕ್ಲಪ್ತ ಸಮಯದಲ್ಲಿ ತಿಳಿದುಕೊಂಡು ಚಿಕಿತ್ಸೆ ನೀಡುವುದೂ ಅಷ್ಟೇ ಮುಖ್ಯ. ಇದಕ್ಕಾಗಿ ತ್ವರಿತವಾಗಿ ಇಸಿಜಿ ತಿಳಿಯುವ ವ್ಯವಸ್ಥೆ ಆಗಬೇಕು. ಸಾಮಾನ್ಯವಾಗಿ ಹೃದಯಾಘಾತ, ಎದೆನೋವು, ತೀವ್ರ ಹೃದಯ ಬೇನೆ, ಬೆವರುವುದು ಮುಂತಾದ ಲಕ್ಷಣಗಳು ರಾತ್ರಿ ಹೊತ್ತು ಸಂಭವಿಸುವುದೇ ಹೆಚ್ಚು. ಇದಕ್ಕೆ ಕೂಡಲೇ ಚಿಕಿತ್ಸೆ ಆರಂಭವಾಗಬೇಕಾದರೆ ರೋಗಿ ಮೊದಲು ಇಸಿಜಿ ಮಾಡಿಸಿಕೊಳ್ಳಲೇ ಬೇಕಾಗುತ್ತದೆ' ಎಂದು ಹೇಳುತ್ತಾರೆ ಮಲ್ಯ ಆಸ್ಪತ್ರೆಯ ನಿರ್ದೇಶಕರಾದ ಡಾ. ರಮಣ ರಾವ್.

'ಹೃದಯಾಘಾತ ಸಂಭವಿಸಿದಾಗ ತುರ್ತು ಚಿಕಿತ್ಸೆ ಬಹಳ ಮುಖ್ಯ. ಇದರ ಜತೆಗೆ ಜೀವನದ ಗುಣಮಟ್ಟ ಸುಧಾರಣೆಯೂ ಮುಖ್ಯವಾಗುತ್ತದೆ. ಕ್ಷಿಪ್ರವಾಗಿ ಫಲಿತಾಂಶ ತಿಳಿಸುವ ಇಸಿಜಿ ಮೆಷಿನ್‌ಗಳು ಹೃದಯದ ಸ್ಥಿತಿಗತಿಯನ್ನು ಕೂಡಲೇ ತಿಳಿಸುತ್ತದೆ. ಟ್ರೈಕಾಗ್ ಎಂಬ ಇಸಿಜಿ ಮೆಷಿನ್ ಇಂತಹ ಉದ್ದೇಶ ಇಟ್ಟುಕೊಂಡೇ ತಯಾರಾಗಿದೆ. ಅತ್ಯಾಧುನಿಕ ತಂತ್ರಜ್ಞಾನದಿಂದ ತಯಾರಿಸಲಾಗಿರುವ ಇದು ಸ್ಮಾರ್ಟ್ ಆ್ಯಪ್‌ನ ಸಹಾಯದಿಂದ ಹೃದಯಾಘಾತಕ್ಕೆ ಒಳಗಾದ ವ್ಯಕ್ತಿಯ ಇಸಿಜಿಯನ್ನು ಐದು ನಿಮಿಷದೊಳಗಾಗಿ ನಿಖರವಾಗಿ ನೀಡುತ್ತದೆ. ತ್ವರಿತವಾಗಿ ಚಿಕಿತ್ಸೆಯನ್ನೂ ನೀಡಬಹುದು. ವ್ಯಾಧಿಯ ಪತ್ತೆ ಹಾಗೂ ಸೂಕ್ತ ಚಿಕಿತ್ಸೆಯನ್ನು ಸರಿಯಾದ ಸಮಯದಲ್ಲಿ ನೀಡಿದರೆ ಹೃದಯಾಘಾತವಾದ ರೋಗಿ ಬದುಕಿ ಉಳಿಯುವ ಸಾಧ್ಯತೆ ಹೆಚ್ಚು' ಎನ್ನುತ್ತಾರೆ ವಿಕ್ರಮ್ ಆಸ್ಪತ್ರೆಯ ನಿರ್ದೇಶಕ ಡಾ.ರಂಗನಾಥ ನಾಯಕ್.